## ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
## ಕೋರಮಂಗಲ ಉಪ-ವಿಭಾಗದ ವಾರ್ಡ್ ಸಂಖ್ಯೆ-151 (ಕೋರಮಂಗಲ)
## ಕಾಟ್ಮನ್ ಪಾರ್ಕ್, ಕೋರಮಂಗಲ ಕ್ಲಬ್ ಹಿಂಭಾಗ, 6ನೇ ಬ್ಲಾಕ್ ಕೋರಮಂಗಲದಲ್ಲಿ ದಿನಾಂಕ: 05.12.2020 ರಂದು ಡಿಸೆಂಬರ್-2020 ರ ಮಾಹೆಯ ವಾರ್ಡ್ ಸಮಿತಿ ಸಭೆಯ ನಡವಳಿಗಳು

ಶ್ರೀ ಪಿ. ವನರಾಜ, ಸಹಾಯಕ ಕಾರ್ಯಪಾಲಕ ಅಭಿಯಂತರರು (ಕೋರಮಂಗಲ) ಮತ್ತು ನೋಡಲ್ ಅಧಿಕಾರಿಗಳು ಹಾಗೂ ವಾರ್ಡ್ ಸಮಿತಿ ಅಧ್ಯಕ್ಷರು ವಾರ್ಡ್ ಸಂಖ್ಯೆ 151ರ ರವರ ಅಧ್ಯಕ್ಷತೆಯಲ್ಲಿ ಕಾಟ್ಮನ್ ಪಾರ್ಕ್, ಕೋರಮಂಗಲು ಕ್ಲಬ್ ಹಿಂಭಾಗ, 6ನೇ ಬ್ಲಾಕ್ ಕೋರಮಂಗಲ, ಬೆಂಗಳೂರು ಇಲ್ಲಿ ದಿನಾಂಕ:05.12.2020 ರಂದು ಬೆಳಗ್ಗೆ 11.00 ಗಂಟೆಗೆ ವಾರ್ಡ್ ಸಮಿತಿ ಸದಸ್ಯರೊಂದಿಗೆ ನಡೆದ ಸಭೆಯ ನಡವಳಿಗಳು:-

**ಹಾಜರಿದ್ದ ಸದಸ್ಯರುಗಳು:**

1. ಶ್ರೀ ಎಂ. ಚಂದ್ರಪ್ಪ (ಮಾಜಿ ಪಾಲಿಕೆ ಸದಸ್ಯರು)
2. ಶ್ರೀಮತಿ ಎಂ.ಎ. ಅಬ್ಬಾಸ್
3. ಶ್ರೀ ಕೆ.ಎನ್. ಚಂದ್ರಶೇಖರ್
4. ಶ್ರೀ ವಿಶ್ವನಾಥ್ ಕಶ್ಯಪ್
5. ಶ್ರೀ ಡಾ॥ ಕೆ. ಉಮೇಶ್ವರ
6. ಶ್ರೀಮತಿ ನೀರಜಾಶೆಟ್ಟಿ
7. ಶ್ರೀ ಎಂ. ಶ್ರೀನಿವಾಸ್

**ಹಾಜರಿದ್ದ ಅಧಿಕಾರಿಗಳ ವಿವರಗಳು**

1. ಶ್ರೀ ಪಿ. ವನರಾಜ, ಸಹಾಯಕ ಕಾರ್ಯಪಾಲಕ ಅಭಿಯಂತರರು (ಕೋರಮಂಗಲ) ಮತ್ತು ನೋಡಲ್ ಅಧಿಕಾರಿಗಳು ಹಾಗೂ ವಾರ್ಡ್ ಸಮಿತಿ ಅಧ್ಯಕ್ಷರು
2. ಶ್ರೀ ಚಂದ್ರಶೇಖರ್ .ಪಿ., ಸದಸ್ಯ ಕಾರ್ಯದರ್ಶಿ ಹಾಗೂ ಕಿರಿಯ ಅಭಿಯಂತರರು ವಾರ್ಡ್-151 ಕೋರಮಂಗಲ
3. ಶ್ರೀ ಎಂ.ಡಿ. ಶದಾಬ್ ಹೈದರ್, ಹಿರಿಯ ಆರೋಗ್ಯ ನೀರಿಕ್ಷಕರು, ಬಿಬಿಎಂಪಿ
4. ಶ್ರೀ ಪಿ.ಜಿ. ಕೃಷ್ಣಮೂರ್ತಿ, ಜಲ ಪರಿವೀಕ್ಷಕರು, ಬೆಂಗಳೂರು ಜಲ ಮಂಡಳಿ
5. ಶ್ರೀಮತಿ ಅಶ್ವಿನಿ .ಎಲ್, ಸಹಾಯಕ ಅಭಿಯಂತರರು, ಮೇಜರ್ ರೋಡ್
6. ಶ್ರೀ ಡಿ. ನರಸಿಂಹಯ್ಯ, ಸೂಪರ್‌ವೈಸರ್, ಘನತ್ಯಾಜ್ಯ
7. ಶ್ರೀ ಜ್ಞಾನೇಶ್, ಸಹಾಯಕ ಅಭಿಯಂತರರು (ಎಲೆಕ್ಟ್ರಿಕಲ್)
8. ಶ್ರೀಮತಿ ವೀಣಾ .ಎನ್, ಪಿ.ಎಸ್.ಐ, ಮಡಿವಾಳ ಪೋಲಿಸ್ ಠಾಣೆ

* * * * * *

ಶ್ರೀ ಪಿ. ವನರಾಜ, ಸಹಾಯಕ ಕಾರ್ಯಪಾಲಕ ಅಭಿಯಂತರರು (ಕೋರಮಂಗಲ) ಮತ್ತು ನೋಡಲ್ ಅಧಿಕಾರಿಗಳು ಹಾಗೂ ವಾರ್ಡ್ ಸಮಿತಿ ಅಧ್ಯಕ್ಷರು ವಾರ್ಡ್ ಸಂಖ್ಯೆ 151 ರವರು ಮೊದಲಿಗೆ ಸಭೆಯಲ್ಲಿ ಹಾಜರಿದ್ದ ವಾರ್ಡ್ ಸಮಿತಿಯ ಎಲ್ಲಾ ಸದಸ್ಯರುಗಳನ್ನು ಮತ್ತು ಇಲಾಖಾ ಅಧಿಕಾರಿಗಳನ್ನು ಸಭೆಗೆ ಸ್ವಾಗತಿಸಿದರು ಮತ್ತು ವಾರ್ಡ್ ವ್ಯಾಪ್ತಿಯಲ್ಲಿನ ಕುಂದು ಕೊರತೆಗಳು, ಅಭಿವೃದ್ಧಿ ಕಾಮಗಾರಿಗಳ ಬಗ್ಗೆ ಚರ್ಚಿಸಲು ತಿಳಿಸಿದರು.



Scanned with CamScanner

ಶ್ರೀ ವಿಶ್ವನಾಥ್ ಕಶ್ಯಪ್ ಮತ್ತು ಶ್ರೀಮತಿ ನೀರಜಾ ಶೆಟ್ಟಿ ರವರು ಮಾತನಾಡಿ, ವಾರ್ಡ್ ಸಮಿತಿ ಸಭೆಯಲ್ಲಿ ಗೈರುಹಾಜರಾಗಿರುವ ಸದಸ್ಯರು ಮುಂದಿನ ವಾರ್ಡ್ ಸಭೆಯಲ್ಲಿ ಕಡ್ಡಾಯವಾಗಿ ಹಾಜರಾಗಲು ಸೂಚಿಸಬೇಕೆಂದು ತಿಳಿಸಿದರು ಹಾಗೂ ಮುಂದಿನ ವಾರ್ಡ್ ಸಭೆಯಲ್ಲಿ ಗೈರು ಹಾಜರಾದವರ ವಿರುದ್ಧ ಕ್ರಮ ಕೈಗೊಳ್ಳಬೇಕೆಂದು ತಿಳಿಸಿದರು.

ಶ್ರೀ ಕೆ.ಎನ್. ಚಂದ್ರಶೇಖರ್ ರವರು ಮಾತನಾಡಿ, ರಾವ್ ಮನೆ ಮುಂಭಾಗದ ರಸ್ತೆಯಲ್ಲಿ ವಾಹನಗಳ ಸಂಚಾರಕ್ಕೆ ತೊಂದರೆಯುಂಟಾಗುವ ಹಾಗೆ ರಸ್ತೆ ವಿಭಜಕಗಳನ್ನು ರಸ್ತೆ ಅಡ್ಡಲಾಗಿ ಅರ್ಧಕ್ಕೆ ನಿರ್ಮಿಸಿರುತ್ತಾರೆ. ಕೂಡಲೇ ರಸ್ತೆಗೆ ಅಡ್ಡಲಾಗಿ ನಿರ್ಮಿಸಿರುವ ರಸ್ತೆ ವಿಭಜಕಗಳನ್ನು ತೆರವುಗೊಳಿಸಿ, ವಾಹನಗಳ ಸುಗಮ ಸಂಚಾರಕ್ಕೆ ಅನುವು ಮಾಡಿಕೊಡಬೇಕೆಂದು ಸಭೆಯಲ್ಲಿ ತಿಳಿಸಿದರು.

ಶ್ರೀಮತಿ ನೀರಜಾಶೆಟ್ಟಿ ರವರು ಮಾತನಾಡಿ, ಬೆಥನಿ ಸ್ಕೂಲ್ ಹತ್ತಿರವಿರುವ ರಸ್ತೆ ಉಬ್ಬುಗಳಿಗೆ Road Studs ಗಳನ್ನು ಹಾಕಬೇಕೆಂದು ತಿಳಿಸಿದರು.

ಶ್ರೀ ಡಾ. ಕೆ. ಉಮಾಮಹೇಶ್ವರ್ ಮತ್ತು ಶ್ರೀ ಎಂ.ಎ. ಅಬ್ಬಾಸ್ ರವರು ಮಾತನಾಡಿ, ವಾಣಿಜ್ಯ ಅಂಗಡಿಗಳ ಮಾಲೀಕರುಗಳು ಫುಟ್‌ಪಾತ್‌ಗಳನ್ನು ಅತಿಕ್ರಮಿಸಿಕೊಂಡು ವ್ಯಾಪಾರಗಳನ್ನು ಮಾಡುತ್ತಿರುತ್ತಾರೆ. ಇದರಿಂದಾಗಿ ಪಾದಚಾರಿ ಮಾರ್ಗದಲ್ಲಿ ಸಾರ್ವಜನಿಕರು ಸಂಚರಿಸಲು ತೊಂದರೆಯಾಗುತ್ತಿರುತ್ತದೆ. ಆದುದರಿಂದ ಪಾದಚಾರಿ ಮಾರ್ಗವನ್ನು ಅತಿಕ್ರಮಿಸಿರುವ ವಾಣಿಜ್ಯ ಅಂಗಡಿಗಳ ವಿರುದ್ಧ ಕ್ರಮ ಕೈಗೊಳ್ಳುವಂತೆ ತಿಳಿಸಿದರು.

ಶ್ರೀ ಡಾ. ಕೆ. ಉಮಾಮಹೇಶ್ವರ್ ರವರು ಮಾತನಾಡಿ, ಉದ್ಯಾನವನಗಳಲ್ಲಿ ಹಾಗೂ ಕೆಲವು ರಸ್ತೆಗಳಲ್ಲಿ ರಸ್ತೆ ದೀಪಗಳು ಹದಗೆಟ್ಟಿರುತ್ತವೆ. ಅವುಗಳನ್ನು ಸರಿಪಡಿಸಬೇಕೆಂದು ಸಭೆಗೆ ತಿಳಿಸಿದರು. ಸಭೆಯಲ್ಲಿ ಹಾಜರಿದ್ದ ಎಲೆಕ್ಟ್ರಿಕಲ್ ವಿಭಾಗದ ಸಹಾಯಕ ಅಭಿಯಂತರರು ಆದ ಶ್ರೀ ಜ್ಞಾನೇಶ್ ರವರು ಮಾತನಾಡಿ, ಹದಗೆಟ್ಟಿರುವ ರಸ್ತೆದೀಪಗಳನ್ನು ಸರಿಪಡಿಸುವುದಾಗಿ ಸಭೆಗೆ ಭರವಸೆಯನ್ನು ನೀಡಿದರು.

ಮೇಜರ್ ರೋಡ್ ವಿಭಾಗದ ಸಹಾಯಕ ಅಭಿಯಂತರರು ಶ್ರೀಮತಿ ಅಶ್ವಿನಿ ಎಲ್. ರವರು ಮಾತನಾಡಿ, ಸೋನಿ ವರ್ಲ್ಡ್ ಜಂಕ್ಷನ್‌ನಿಂದ ಪಾಸ್‌ಪೋರ್ಟ್ ಆಫೀಸ್ ವರೆಗೂ ಕೈಗೊಂಡಿರುವ ಚರಂಡಿ ಕಾಮಗಾರಿಯ ಬಗ್ಗೆ ಪೂರ್ಣ ಮಾಹಿತಿಯನ್ನು ಸಭೆಗೆ ತಿಳಿಸಿದರು.

ಶ್ರೀ ಡಾ. ಕೆ. ಉಮಾಮಹೇಶ್ವರ್ ರವರು ಮಾತನಾಡಿ, 18ನೇ ಮುಖ್ಯರಸ್ತೆಯಲ್ಲಿನ ಫುಟ್‌ಪಾತ್‌ನಲ್ಲಿ ಎಳನೀರು ಅಂಗಡಿಯ ವ್ಯಾಪಾರಿಯು ಆ ಸ್ಥಳವನ್ನು ಸ್ವಚ್ಛವಾಗಿಡದೇ, ಎಳನೀರಿನ ಕಸವನ್ನು ಅಲ್ಲಿಯೇ ಬಿಡುತ್ತಿರುತ್ತಾರೆ. ಆದುದರಿಂದ ಆ ಸ್ಥಳದಲ್ಲಿ ಸ್ವಚ್ಛವಾಗಿಡುವಂತೆ ಸೂಚಿಸಲು ತಿಳಿಸಿದರು.

ಶ್ರೀ ಕೆ.ಎನ್. ಚಂದ್ರಶೇಖರ್ ರವರು ಮಾತನಾಡಿ, ಸೆಂಟ್‌ಜಾನ್ಸ್ ಹಾಸ್ಪೆಲ್ ಮುಂಭಾಗ ಕುಡಿಯುವ ನೀರಿನ ಕೊಳವೆಯು ಹಾನಿಯಾಗಿದ್ದು, ನೀರು ಸೋರಿಕೆಯಾಗುತ್ತಿರುತ್ತದೆ. ಆದುದರಿಂದ ಕೊಳವೆಯ ದುರಸ್ಥಿ ಕಾಮಗಾರಿಯನ್ನು ಕೈಗೊಳ್ಳಬೇಕೆಂದು ತಿಳಿಸಿದರು.

ಎಂ.ಡಿ. ಶದಾಬ್ ಹೈದರ್, ಹಿರಿಯ ಆರೋಗ್ಯ ಪರಿವೀಕ್ಷಕರು ರವರ ಮಾತನಾಡಿ, ಕೋವಿಡ್-19 ರ ಬಗ್ಗೆ ಸಂಪೂರ್ಣ ಮಾಹಿತಿಯನ್ನು ಹಾಗೂ ಜಾಗೃತಿಯ ಬಗ್ಗೆ ಸಭೆಗೆ ತಿಳಿಸಿದರು.

ಶ್ರೀ ಡಾ. ಕೆ. ಉಮಾಮಹೇಶ್ವರ್ ರವರು ಮಾತನಾಡಿ, ಆಯುರ್ವೇದಿಕ್ ಮತ್ತು ಹೋಮಿಯೋಪತಿ ಔಷಧಿಗಳು ಕೋವಿಡ್-19ಕ್ಕೆ ಉಪಯೋಗವಾಗುವುದರಿಂದ ಸರ್ಕಾರಕ್ಕೆ ಶಿಫಾರಸ್ಸು ಮಾಡಲು ತಿಳಿಸಿದರು.



Scanned with CamScanner

ಶ್ರೀಮತಿ ನೀರಜಾಶೆಟ್ಟಿ ರವರು ಮಾತನಾಡಿ, ಕಾಟ್ಮನ್ ಪಾರ್ಕ್ ಅನ್ನು ಅಭಿವೃದ್ಧಿಗೊಳಿಸಬೇಕೆಂದು ತಿಳಿಸಿದರು.

ಕೊನೆಯದಾಗಿ ನೋಡಲ್ ಅಧಿಕಾರಿಗಳು ಹಾಗೂ ವಾರ್ಡ್ ಸಮಿತಿ ಅಧ್ಯಕ್ಷರು ಸಭೆಗೆ ಹಾಜರಾದ ಎಲ್ಲಾ ಸದಸ್ಯರು ಮತ್ತು ಅಧಿಕಾರಿಗಳಿಗೆ ವಂದನೆಯನ್ನು ತಿಳಿಸುತ್ತಾ, ಇಂದಿನ ಸಭೆಯಲ್ಲಿ ಕೈಗೊಂಡ ನಿರ್ಣಯಗಳನ್ನು ಅನುಷ್ಠಾನಕ್ಕೆ ತಂದು ಮತ್ತು ಮುಂದಿನ ವಾರ್ಡ್ ಸಭೆಯಲ್ಲಿ ಕೈಗೊಂಡಿರುವ ಕ್ರಮಗಳ ಬಗ್ಗೆ ಚರ್ಚಿಸಲಾಗುವುದು ಎಂದು ತಿಳಿಸುತ್ತಾ, ಸಭೆಯನ್ನು ಮುಕ್ತಾಯಗೊಳಿಸಲಾಯಿತು.

(ಶ್ರೀ. ಚಂದ್ರಶೇಖರ್ .ಪಿ)
ಸದಸ್ಯ ಕಾರ್ಯದರ್ಶಿ
ಹಾಗೂ ಕಿರಿಯ ಅಭಿಯಂತರರು,
ವಾರ್ಡ್–151 ಕೋರಮಂಗಲ

(ಶ್ರೀ ಪಿ. ವನರಾಜ)
ಸಹಾಯಕ ಕಾರ್ಯಪಾಲಕ ಅಭಿಯಂತರರು
(ಕೋರಮಂಗಲ) ಮತ್ತು ನೋಡಲ್ ಅಧಿಕಾರಿಗಳು
ಹಾಗೂ ವಾರ್ಡ್ ಸಮಿತಿ ಅಧ್ಯಕ್ಷರು


<u>ಪ್ರತಿಯನ್ನು:</u>

1. ಕೇಂದ್ರ ಕಛೇರಿಯ bbmp198wardcommitte@gmail.com ಇ–ಮೇಲ್ ಮುಖಾಂತರ ಸಲ್ಲಿಸುತ್ತಾ ಬೃ.ಬೆಂ.ಮ.ಪಾಯ ಅಂತರ್ಜಾಲದಲ್ಲಿ ಪ್ರಕಟಿಸಲು ಈ ಮೂಲಕ ಕೋರಲಾಗಿದೆ.
2. ಕಛೇರಿ ಕಡತಕ್ಕೆ.

Scanned with CamScanner

Date :- 05-12-2020
Day :- Saturday.

Ward Committee Meeting ward 151 Kormangala.





Scanned with CamScanner

Ward Committee Meeting
Ward 151 Kormangala

Date 05/12/2020
Day Saturday.

| Sl. NO | Name | Signature |
|---|---|---|
| 1 | M. Chandrappa | [signature] |
| 2 | Padmashree Balaram | |
| 3 | M.A. Abbas | [signature] |
| 4 | K.N. Chandrashekar | [signature] |
| 5 | Vishwanath Kashyap | [signature] |
| 6 | G.M. Shetty | |
| 7 | Dr K. Umeshwara | [signature] |
| 8 | Jayaramu | |
| 9 | Neerajashetty | [signature] |
| 10 | M. Srinivasa | [signature] |
| 11 | M. Sampangi Raju | |
| 12 | Parejan. A | |
| 13 | P. Chandrashekar [J.E 151] | [signature] 05/12/2020 |
| 14. | P. Vanaraja [Nodal officer WARD-151] | [signature] 05/12/2020. |

Names of the Officers Attended



| Sl. NO | Name | Department | Signature |
|---|---|---|---|
| 1 | [illegible] | [illegible] | [signature] |
| 2. | ಶಾಬಾಜ್ ಹೈದರ್ (ಕ.ಇ.ಪ್ರ BBMP) | BBMP | [signature] |
| 3. | Ashwini.L (Assistant Engineer 2) | BBMP | [signature] |
| 4 | D. Narasimhaiah | Major Roads BBMP Supervisor (Garbage) | [signature] |
| 5. | P. Jnaneshwar | AE(Ele) | [signature] |
| 6 | Veena N. PSI | PSI madiwala PI | [signature] |

Scanned with CamScanner

# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಕಾರ್ಯದರ್ಶಿ ವಾರ್ಡ್ ಸಮಿತಿ/ ಕಿರಿಯ ಅಭಿಯಂತರರು ರವರ ಕಛೇರಿ, ಕೋರಮಂಗಲ ವಾರ್ಡ್ 151,
ಪಾಲಿಕೆ ಕಟ್ಟಡಗಳು, 2ನೇ ಅಡ್ಡರಸ್ತೆ,5ನೇ ಬ್ಲಾಕ್, ಕೋರಮಂಗಲ, ಬೆಂಗಳೂರು

ದಿನಾಂಕ:02.12.2020

## -: ಸಭೆ ತಿಳುವಳಿಕೆ ಪತ್ರ :-

**ವಿಷಯ :-** ದಿನಾಂಕ:05-12-2020 ರಂದು ವಾರ್ಡ್ ಸಮಿತಿ ಸಭೆಯನ್ನು ಆಯೋಜಿಸಿರುವ ಬಗ್ಗೆ.

**ಉಲ್ಲೇಖ:-** ಮಾನ್ಯ ಆಯುಕ್ತರು, ಬಿಬಿಎಂಪಿ ರವರ ಕಚೇರಿ ಆದೇಶದ ಪತ್ರ ಸಂಖ್ಯೆ: ಬಿ12(5)/ಪಿಆರ್/35/2020-21, ದಿನಾಂಕ:21-09-2020.

* * * * *

ಈ ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ವಾರ್ಡ್-151 ರ ನೋಡಲ್ ಅಧಿಕಾರಿರವರಾದ ಶ್ರೀ ಪಿ. ವನರಾಜ, ಸಹಾಯಕ ಕಾರ್ಯಪಾಲಕ ಅಭಿಯಂತರರು, ಕೋರಮಂಗಲ ಉಪವಿಭಾಗ ರವರ ಅಧ್ಯಕ್ಷತೆಯಲ್ಲಿ ದಿನಾಂಕ:05.12.2020 ರಂದು ಬೆಳಗ್ಗೆ 11.00 ಕ್ಕೆ ಸ್ಥಳ: **ಕಾಟ್ಮನ್ ಪಾರ್ಕ್, ಕೋರಮಂಗಲ ಕ್ಲಬ್ ಹಿಂಭಾಗ, 6ನೇ ಬ್ಲಾಕ್ ಕೋರಮಂಗಲ, ವಾರ್ಡ್ 151, ಬೆಂಗಳೂರು** ರಲ್ಲಿ ವಾರ್ಡಿಗೆ ಸಂಬಂಧಪಟ್ಟ ಕುಂದುಕೊರತೆಗಳ ಬಗ್ಗೆ ಚರ್ಚಿಸಲು ವಾರ್ಡ್ ಕಮಿಟಿ ಸಭೆಯನ್ನು ನಡೆಸಲು ನಿರ್ಧರಿಸಲಾಗಿದ್ದು, ಸದರಿ ದಿನಾಂಕದಂದು ತಾವುಗಳು ತಪ್ಪದೇ ಹಾಜರಾಗಲು ಈ ಮೂಲಕ ತಿಳಿಸಲಾಗಿದೆ.

**ಸಭೆಯಲ್ಲಿ ಚರ್ಚಿಸತಕ್ಕ ವಿಷಯಗಳು**: 1) ವಾರ್ಡಿನ ಘನತ್ಯಾಜ್ಯದ ಬಗ್ಗೆ 2) ವಾರ್ಡಿನಲ್ಲಿ ಕೋವಿಡ್-19ರ ಬಗ್ಗೆ 3) ವಾರ್ಡಿನಲ್ಲಿ ಪ್ರಗತಿಯಲ್ಲಿರುವ ಕಾಮಗಾರಿಗಳ ಬಗ್ಗೆ 4) ವಾರ್ಡಿನಲ್ಲಿ ಅನಧಿಕೃತವಾಗಿ ರಸ್ತೆ ಕತ್ತರಿಸಿರುವ ಬಗ್ಗೆ (ಓಎಫ್‌ಸಿ ಅಥವಾ ಬೇರೆ ಇಲಾಖೆಗಳಿಂದ) 5) ಸಾರ್ವಜನಿಕರ ಮೂಲಭೂತ ಸೌಕರ್ಯಗಳ ಬಗ್ಗೆ 6) BWSSB, BESCOM & POLICE ಇಲಾಖೆಗಳ ಹಾಗೂ ತೆರಿಗೆ ವಸೂಲಾತಿಗಳ ಬಗ್ಗೆ ಈ ವಿಷಯಗಳಿಗೆ ಸಂಬಂಧಿಸದ ಮಾಹಿತಿಗಳೊಂದಿಗೆ ತಪ್ಪದೇ ಈ ಸಮಿತಿ ಸಭೆಗೆ ಹಾಜರಾಗಲು ಈ ಮೂಲಕ ತಿಳಿಸಲಾಗಿದೆ.

ತಮ್ಮ ವಿಶ್ವಾಸಿ,

ಕಾರ್ಯದರ್ಶಿ, ವಾರ್ಡ್ ಸಮಿತಿ
ವಾರ್ಡ್ ಸಂಖ್ಯೆ 151, ಕೋರಮಂಗಲ

**ಪ್ರತಿಯನ್ನು:-**

1. ಶ್ರೀ ಪಿ. ವನರಾಜ, ಸಹಾಯಕ ಕಾರ್ಯಪಾಲಕ ಅಭಿಯಂತರರು (ಕೋರಮಂಗಲ ಉಪವಿಭಾಗ) ಮತ್ತು ನೋಡಲ್ ಅಧಿಕಾರಿಗಳು ಹಾಗೂ ಮಾನ್ಯ ವಾರ್ಡ್ ಸಮಿತಿ ಅಧ್ಯಕ್ಷರು ರವರಿಗೆ ಮಾಹಿತಿಗಾಗಿ ಸಲ್ಲಿಸಿದೆ.
2. ವಾರ್ಡ್ ಸಮಿತಿ ಸದಸ್ಯರುಗಳು ಹಾಗೂ ಅಧಿಕಾರಿಗಳಿಗೆ ಮಾಹಿತಿಗಾಗಿ ಸಲ್ಲಿಸಿದೆ.
3. ಕಾರ್ಯಪಾಲಕ ಅಭಿಯಂತರರು (ಬಿ.ಟಿ.ಎಂ. ಲೇಔಟ್ ವಿಭಾಗ) ಮಾಹಿತಿಗಾಗಿ ಸಲ್ಲಿಸಿದೆ.
4. ಸಹಾಯಕ ಕಾರ್ಯಪಾಲಕ ಅಭಿಯಂತರರು, ಕೋರಮಂಗಲ ಉಪವಿಭಾಗ, ಬೆಂಗಳೂರು ಮಾಹಿತಿಗಾಗಿ ಸಲ್ಲಿಸಿದೆ.
5. ಸಹಾಯಕ ಕಾರ್ಯಪಾಲಕ ಅಭಿಯಂತರರು, ಘನತ್ಯಾಜ್ಯ ನಿರ್ವಹಣಾ ವಿಭಾಗ, ಬಿ.ಟಿ.ಎಂ.ಲೇಔಟ್ ವಿಭಾಗ, ಆಡುಗೋಡಿ, ಬೆಂಗಳೂರು ಮಾಹಿತಿಗಾಗಿ ಸಲ್ಲಿಸಿದೆ.
6. ಆರೋಗ್ಯವೈದ್ಯಾಧಿಕಾರಿಗಳು, ಬಿ.ಟಿ.ಎಂ. ಲೇಔಟ್ ವಿಭಾಗ, ಬೆಂಗಳೂರು ಮಾಹಿತಿಗಾಗಿ ಸಲ್ಲಿಸಿದೆ.
7. ಸಹಾಯಕ ನಿರ್ದೇಶಕರು, ತೋಟಗಾರಿಕೆ, ಬಿ.ಬಿ.ಎಂ.ಪಿ. (ದಕ್ಷಿಣ), ಜಯನಗರ, ಬೆಂಗಳೂರು ಮಾಹಿತಿಗಾಗಿ ಸಲ್ಲಿಸಿದೆ.

02/12

Scanned with CamScanner